**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:- 105/2025**

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ಇಮ್ರಾನ್ ಪಾಷ | | **ಪಿ.ಡಬ್ಲ್ಯೂ:-6** |
| **ತಂದೆಯ ಹೆಸರು** | : ಅಲ್ಲಾ ಭಕ್ಷ್ | | **ಸಿ.ಡಬ್ಲ್ಯೂ:- 8** |
| **ವಯಸ್ಸು** | : 31 ವರ್ಷ | | |
| **ಉದ್ಯೋಗ** | : ಟೈಲ್ಸ್ ಕೆಲಸ | | |
| **ವಾಸಸ್ಥಳ** | : ಮೈಸೂರು. | | |

**ಸಾಕ್ಷಿಯನ್ನು ಈ ದಿನ ದಿ:25.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ಚಾ.ಸಾ:9 ಸೈಯ್ಯದ್ ತನ್ವಿರಿನ ಪರಿಚಯ ಇದೆ. ಮೃತ ಮುದಾಸಿರ್ ಸೈಯ್ಯದ್ ತನ್ವಿರಿನ ಅಣ್ಣನಿರುತ್ತಾನೆ.

**2.** ಈಗ ನಾನು ನೋಡುತ್ತಿರುವ ನಿಶಾನೆ ಪಿ-14 ಶವ ಪಂಚನಾಮೆಯಲ್ಲಿರುವ ಸಹಿ ನನ್ನದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-14(ಬಿ) ಎಂದು ಗುರುತಿಸಿದೆ. ಈಗ್ಗೆ ಅಂದಾಜು ಒಂದು ವರ್ಷದ ಹಿಂದೆ ಸೈಯ್ಯದ್ ತನ್ವಿರ್ ನನ್ನ ಅಣ್ಣನನ್ನು ಯಾರೋ ಸಾಯಿಸಿದ್ದಾರೆ, ಬನ್ನಿ ಎಂದು ಹೇಳಿದ್ದರಿಂದ ನಾನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿದ್ದೆ. ಆ ಕಾಲಕ್ಕೆ ಮುದಾಸಿರ್ ನ ಶವ, ಶವ ತನಿಖೆ ಮಾಡುತ್ತಿದ್ದ ಕೊಠಡಿಯಲ್ಲಿ ಇತ್ತು. ಆ ಕಾಲಕ್ಕೆ ಯಾರೋ ಹೊಡೆದು ಸಾಯಿಸಿದ್ದಾರೆ ಎಂದು ಹೇಳಿದ್ದರು ಮತ್ತು ಶವವನ್ನು

ಪಡೆಯುವ ಕಾಲಕ್ಕೆ ನನ್ನ ಸಹಿಯನ್ನು ಪಡೆದಿದ್ದರು. ಆ ಕಾಲಕ್ಕೆ ಮುದಾಸಿರ್ ನ ತಲೆಗೆ ಗಾಯ ಆಗಿತ್ತು. ಪೊಲೀಸರಿಗೆ ನಾನು ನನ್ನ ಹೇಳಿಕೆಯನ್ನು ಕೊಟ್ಟಿಲ್ಲ.

**3.** ನಿಶಾನೆ ಪಿ–14 ಕ್ಕೆ ಸಹಿ ಮಾಡಿದಾಗ ಪೋಟೋ ತೆಗೆದಿದ್ದಾರೆ. ಈಗ ನಾನು ನೋಡುತ್ತಿರುವ ನಿಶಾನೆ ಪಿ–15 ಪೋಟೋದಲ್ಲಿ ನಾನು ಇದ್ದೇನೆ. ನಿಶಾನೆ ಪಿ–16 ರಿಂದ 19 ಪೋಟೋಗಳಲ್ಲಿ ಮುದಾಸಿರ್ ನ ಶವ ಇದೆ.

> (ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**4.** ನಿಶಾನೆ ಪಿ–14 ಕ್ಕೆ ಸಹಿ ಹಾಕುವ ಮೊದಲು ಪೊಲೀಸರು ಮುದಾಸಿರ್ ನ ದೇಹದ ಮೇಲೆ ಎಲ್ಲೆಲ್ಲಿ ಗಾಯಗಳಾಗಿದೆ ಎಂದು ಅದರಲ್ಲಿ ಬರೆದುಕೊಂಡಿದ್ದರು ಎಂದರೆ ಸರಿಯಲ್ಲ. ಸೈಯ್ಯದ್ ತನ್ವಿರ್ ನನಗೆ ಪೋನ್ ಮಾಡಿದಾಗ ನಾನು ಅವರ ಮನೆಯ ಬಳಿ ಹೋಗಿ ನಂತರ ಸಮುದಾಯ ಭವನದ ಬಳಿ ಹೋದಾಗ ಅಲ್ಲಿ ಪೊಲೀಸರು ಬಂದು ನೋಡುತ್ತಿದ್ದರು ಎಂದರೆ ಸರಿಯಲ್ಲ.

**5.** ನಂತರ ಮುದಾಸಿರ್ ನ ತಾಯಿಗೆ ವಿಷಯ ತಿಳಿಸಿದಾಗ, ಮುದಾಸಿರ್ ನ ತಾಯಿ ಮತುತ ಚಾ.ಸಾಃ9 ಸೈಯ್ಯದ್ ತನ್ವಿರ್ ಸಮುದಾಯ ಭವನದ ಬಳಿ ಬಂದು ನೋಡಿದ್ದರು ಎಂದರೆ ಸರಿಯಲ್ಲ. ಅಲ್ಲಿ ಮುದಾಸಿರ್ ಸತ್ತು ಬಿದ್ದಿದ್ದಎಂದರೆ ನಾನು ನೋಡಿಲ್ಲ. ಅಲ್ಲಿದ್ದ ಜನರು ಕೋರ್ಟ ಮುಂದಿರುವ ಆರೋಪಿ ಮುದಾಸಿರ್ ಗೆ 100 ಕೊಡು ಎಂದು ಕೇಳಿದಾಗ ಅವನು ಹಣ ಇಲ್ಲ ಎಂದು ಹೇಳಿದ್ದರಿಂದ ಇಬ್ಬರಿಗೂ ಗಲಾಟೆ

ಆಗಿ ಅಲ್ಲಿದ್ದವರು ಜಗಳ ಬಿಡಿಸಿ ಕಳುಹಿಸಿದ್ದರು ಮತ್ತು ಅವರಿಬ್ಬರು ಸಮುದಾಯ ಭವನದ ಹಜಾರ್ ಬಳಿ ಬಂದು ಮಲಗಿಕೊಂಡರು. ನಂತರ ಅಲ್ಲಿಯೂ ಸಹ ಇಬ್ಬರಿಗೂ ಗಲಾಟೆ ಆಗಿ ಸೈಯ್ಯದ್ ಮುದಾಸಿರ್ ಮಲಗಿದಾಗ, ಆರೋಪಿ ಸಿಮೆಂಟ್ ಇಟ್ಟಿಗೆಯನ್ನು ಅವನ ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡಿದ್ದಾನೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಶವ ತನಿಖೆ ಸಮಯದಲ್ಲಿ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ಹೇಳಿಕೆ ಸದರಿ ಭಾಗವನ್ನು ನಿಶಾನೆ ಪಿ–14(ಸಿ) ಎಂದು ಗುರುತಿಸಿದೆ.

**6.** ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/–**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**